ಅರತ್ಕೋಬೇಕು, ನನ್ನ ಸುತ್ತಲಿನ ಪ್ರಪಂಚವನ್ನ, ನನ್ನ ಪರಿಸರವನ್ನ ಅರ್ಥಾ ಮಾಡ್ಕೋಬೇಕು ಅನ್ನುವಂಥಾ ಒಂದ್ ಜಿಜ್ಞಾಸೆ ಏನೈತೆಲ್ಲಾ, ಇದು ಬಹುಶಃ ನನಗ ಗುಂಗ್ ಹಿಡಿಸಿದಂಥಾ ಒಂದ್ ಕಾರ್ಣ ಅಂತ ನನಗ ಅನಸ್ತೈತಿ.

ಯಾರೋ ಆಡಿದೆಂಥಾ ಒಂದ್ ಮಾತಿರಬೌದು, ಎಲ್ಲೋ ಕಂಡಂಥಾ ಒಂದ್ ನೋಟ ಇರಬೌದು ಅಥವಾ ಒಂದ್ ಗಾದಿ ಮಾತು ಮಾತಿರಬೌದು, ಒಂದ್ ಸಣ್ಣ ಪ್ರತಿಮೆ ಇರಬೌದು, ಇದು ನನ್ನ ಹಾಂಟ್ (haunt) ಮಾಡಿ, ಮಾಡಿ, ಮಾಡಿ, ಒಂದ್ ಘಟ್ಟಕ್ಕ ಹೀಂಗ್ ತರ್ತಿತ್ತಲ್ಲಾ, ನಾನು ಬರೀಲೇಬೇಕು ಅನ್ನೂ ಸ್ಥಿತಿಗೆ ನಾನೂ ಮುಟ್ಟಿದ್ದೈತಿ. ಹಂಗ್, ಬರಿಯೋದು ಒಂದು ಅನಿವಾರ್ಯ ಕ್ರಿಯೆ ಅಂತ ಅನಿಸಿ ಅದನ್ನ ನಾ ಬರೆದಂಥಾ ಅನೇಕ ಉದಾಹರಣೆಗಳು ಅದಾವ.

ಅಂದ್ರ, ಅನುಭವದ ಅಭಿವ್ಯಕ್ತಿ ಒಂದ್ ಮಗ್ಗಲ ಅಷ್ಟs. ಅದರ ಜೊತಿಗೆ ಭಾಷೆಯ ಮಾಧ್ಯಮಾನ ಬಳಸಿಕೊಂಡು, ಅನುಭವಗಳನ್ನ ಹುಡಕ್ಕೋಂತ ಹೋಗೂದು, ಅರ್ಥಗಳನ್ನ ಹುಡಿಕ್ಕೋಂತ ಹೋಗೂದು, ಆಮ್ಯಾಲೆ ಜೀವನದ ಬ್ಯಾರೆ ಬ್ಯಾರೆ ನಿಗೂಢಗಳು—ರಹಸ್ಯಗಳು ಅಂತ ನಾವೇನಂತೀವಿ, ಅವುಗಳನ್ನ ಸೈತ ಹುಡಿಕ್ಕೊಂಡು ಹೋಗಿ, ಅರ್ಥವನ್ನ ಕಂಡುಕೊಳ್ಳಬೇಕು ಅನ್ನೂವಂಥಾ ಒಂದು ಹಂಬಲಾ, ಇದು ಬಹುಶಃ ನನ್ನ ಎಲಾ ರೀತಿಯ ಬರವಣಿಗೆಯ ಹಿಂದ್ ಒಂದ್ ಪ್ರೇರಣಾ ಆಗಿ ಕೆಲಸಾ ಮಾಡೇತಿ ಅಂತ ನನಗನಿಸ್ತೈತಿ.

ಆಮ್ಯಾಲ ಈ ಭಾಷೆಯ ಮಾಧ್ಯಮದ ಮ್ಯಾಲೆ, ಕಾವ್ಯದ ಮಾಧ್ಯಮದ ಮ್ಯಾಲೆ ಒಂಥರದ ಹಿಡಿತ, competenc ಬಂದ್ ಮ್ಯಾಲ, ಬ್ಯಾರೆ ಬ್ಯಾರೆ ಆಯಾಮಗಳು ಸೇರ್ಕೊಳ್ಳಬೌದು. ಅಂದ್ರ ರಾಜಕೀಯವಾದಂಥಾ, ಸಾಮಾಜಿಕವಾದಂಥಾ ಕೆಲವು insights, ಕೆಲವು ಒಳನೋಟಗಳು ನಮ್ಮ ಓದಿನಿಂದ, ನಮ್ಮ ಅಧ್ಯಯನದಿಂದ ಅವು ಬರಬೌದು. ಉದಾಹರಣೆಗೆ ಹೇಳಬೇಕಂತಂದ್ರ, ಬಸವಣ್ಣ ನನಗ ಭಾಳ ಕಾಡಿದೆಂಥಾ ವ್ಯಕ್ತಿ. ಗಾಂಧಿ, ಆಮ್ಯಾಲ ಲೋಹಿಯಾ ಅವರ ವಿಚಾರಧಾರೆ ಸೈತ ನನ್ನ ಭಾಳ ಕಾಡಿದಂಥಾವು. ಇಲ್ಲೆ ನಮ್ಮ ಇಡೀ ಬದುಕನ್ನ, ನಮ್ಮ ಇಡೀ ಭೂತವನ್ನ, ಇತಿಹಾಸವನ್ನ ಅರ್ಥಾ ಮಾಡಿಕೊಂಡು, ಆ ಅರ್ಥದ ಕಕ್ಷೆಯೊಳಗ ವರ್ತಮಾನವನ್ನ ಇಟಗೊಂಡು, ಅದನ್ನ ಅರ್ಥಾ ಮಾಡಿಕೊಂಡು ನಮ್ಮ ನಾಳಿನ ಕನಸನ್ನ ಹೆಂಗ್ ಹೆಣೀಬೌದು ಅನತಕ್ಕಂಥಾ ಸಾಧ್ಯತೆಯನ್ನು ಸೈತ ಇಂಥಾ ಒಂದು ಪರಿಜ್ಞಾನಾನ ಕೊಡಬೌದು ಅಂತನಸ್ತೈತಿ. ಇದರ ಒಂದ್ ತುತ್ತ ತುದಿ ಏನಂತಂದ್ರ 'ಖಡ್ಗವಾಗಲಿ ಕಾವ್ಯ' ಅನ್ನೂದು. ಒಂದ್ ಕಾಲಕ್ಕ ನಾನು 'ಕಾವ್ಯಕನ್ನೆಗೆ' ಅಂತ ಒಂದ್ ಪದ್ಯಾ ಬರ್ದಿದ್ದ್ಯಾ. ಅವಾಗ ಕಾವ್ಯ, ಕನ್ಯೆ ಆಗಿದ್ಲು ಆದ್ರ ಈಗ ಅದೇ ಕನ್ಯಾ ಖಡ್ಗ ಆಗಿದ್ದನ್ನ ನಾವ್ ನೋಡ್ತೇವಿ. ಇದರ ಅರ್ಥ ಏನಂತಂದ್ರ ಕಾವ್ಯದ ಮಾಧ್ಯಮದ ಮೂಲಕ ಬಹುಶಃ ನಾವು ಒಂದು ಸಾಮಾಜಿಕ ಬದಲಾವಣೆಯನ್ನ ತರಬೌದು ಅಂತ. ಹಿಂದ್ ಸರ್ವಜ್ಞನ ಮ್ಯಾಲೆ ಒಂದು ಕವನಾ ಬರದಾಗ, ಅಲ್ಲೆ ಬರೆದಂಥಾ ಕೆಲವು ಸಾಲುಗಳಿವು—

ಈ ಕೋಟು ಬೂಟು, ಟಾಯಿ—ಗೀಯಿ ಕಳಚಿ
ಖಾಲಿ ಲಂಗೋಟಿ ಮ್ಯಾಲ ಇಡೀ ಪ್ರಪಂಚಾ ಸುತ್ತಬೇಕು,
ಕಂಡಕಂಡವರ ಕಣ್ಣ ಹಿಂದ, ರೆಪ್ಪೀ ಹಿಂದ, ಚರ್ಮದ ಹಿಂದ ಹೊಕ್ಕು
ಅವರ ಒಳಗಿನ ಒಳಗಿನ ಒಳಗಿನ ಗಂವ್ಯಾಗ ಹೊಕ್ಕು
ಒಳಗಿನಿಂದ ಢಂ ಅಂತ ಅಟಂಬಾಂಬ್ ಹಾರಸ್ಬೇಕು,
ಜೇಂವಾ ಹಿಂಡಿ ಮಾತ ಮಾಡಿ, ಡಬ್ಬಣದಂಗ ಚೂಪ ಮಾಡಿ,
ಕಬ್ಬಣದಂಗ ಕಾಸಿ ಕಾಸಿ
ದಪ್ಪ ತೊಗಲಿನ ನಮ್ಮ ಜನಕ್ಕ, ನಮ್ಮ ಮನಕ್ಕ

